# ಪ್ರಧಾನ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.

**ಸಿ.ಸಿ ನಂಃ 1756/ 2025**

| | | |
|---|---|---|
| ಸಾಕ್ಷಿಯ ಹೆಸರುಃ | ಶ್ರೀ ನರಸಿಂಗಪ್ಪ | ಫ್ರಾಸಾಃ **01** |
| ತಂದೆಯ/ಗಂಡನ ಹೆಸರುಃ | ಬಸಪ್ಪ | ಚಾಸಾಃ **04** |
| ವಯಸ್ಸುಃ | **63** ವರ್ಷ | ದಿಃ **30-07-2026** |
| ಉದ್ಯೋಗಃ | ಒಕ್ಕಲುತನ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಅನಪೂರ ಗ್ರಾಮ | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ

ಚಾಸಾಃ 1 ರವರು ಚಿಕ್ಕಪ್ಪನ ಮಗ ಆಗಿರುತ್ತಾರೆ. ನನಗೆ ಚಾಸಾ 5 ಮತ್ತು 6 ರವರ ಪರಿಚಯ ಇದೆ. ಆರೋಪಿತರು ನನ್ನ ತಮ್ಮನ ಮಕ್ಕಳಾಗಿರುತ್ತಾರೆ.

ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ.

( ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರು ಎಂದು ಪರಿಗಣಿಸಿ ಪಾಟೀ ಸವಾಲು ಮಡಲು ಅನುಮತಿ ಕೋರಿದರು - ಅನುಮತಿ ನೀಡಲಾಯಿತು)

ಪಾಟೀ ಸವಾಲು ಃ ಮಾನ್ಯ ಸ.ಸ.ಅ. ರವರಿಂದಃ

ದಿಃ 03-07-2024 ರಂದು ಮ 12-00 ಗಂಟೆಗೆ ನಾನು ಹಾಗೂ ಅರೋಪಿತರು ಮಾತನಾಡುತ್ತಾ ಕುಳಿತ್ತಿದ್ದಾಗ ಚಾಸಾ 1 ರವರು ಅಲ್ಲಿಗೆ ಬಂದಿದ್ದು, ಆಗ 1 ನೇ ಅರೋಪಿ ಚಾಸಾ 1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದನು ಎಂದರೆ ಸರಿಯಲ್ಲ. 1 ನೇ ಆರೋಪಿ ಕೈಯಿಂದ ಚಾಸಾ -1 ರವರ ಎದೆಗೆ ಹೊಡೆದು ನೂಕಿಕೊಟ್ಟಾಗ ಮರಗಮ್ಮರವರ ಮನೆಯ ಮುಂದಿನ ಕಟ್ಟೆಗೆ ಚಾಸಾ 1 ರವರ ತಲೆ ಹೊಡೆದು ಗಾಯವಾಗಿತ್ತು ಎಂದರೆ ಸರಿಯಲ್ಲ. ಆಗ 2 ಮತ್ತು 3 ನೇ ಆರೋಪಿತರು ಚಾಸಾ 1 ರವರಿಗೆ ಕೈಯಿಂದ ಹೊಡಿಬಡಿ ಮಾಡಿ ಕಾಲಿನಿಂದ ಒದ್ದಿರುತ್ತಾರೆ ಎಂದರೆ ಸರಿಯಲ್ಲ. ಆಗ ನಾನು ಮತ್ತು ಚಾಸಾ- 5 ಹಾಗೂ 6 ರವರು ಸೇರಿ ಜಗಳ ಬಿಡಿಸಿದ್ದೇವು ಎಂದರೆ ಸರಿಯಲ್ಲ. ನಂತರ 1 ನೇ ಆರೋಪಿ ಚಾಸಾ 1 ರವರಿಗೆ ಜೀವದ

ಬೇದರಿಕೆ ಹಾಕಿದ್ದನು ಎಂದರೆ ಸರಿಯಲ್ಲ. ನಾನು ಈ ಮೇಲಿನಂತೆ ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಹೇಳಿಕೆಯನ್ನು ನಿಪಿ 1 ಎಂದು ಗುರುತಿಸಲಾಯಿತು. ಈ ಎಲ್ಲಾ ವಿಷಯ ಗೊತ್ತಿದ್ದರೂ ನಾನು ಆರೋಪಿತರಿಗೆ ರಾಜಿ ಮಾಡಿಕೊಂಡ ಕಾರಣ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರವಾಗಿಃ</u>

ಆರೋಪಿ ಪರ  ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರುವಿಚಾರಣೆ ಃ ಇರುವುದಿಲ್ಲ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ.